**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.**

**ಸಿ.ಸಿ.ನಂ. 2241/2024**

**ಫಿರ್ಯಾದುದಾರರು** : ಚಿಂತಾಮಣಿ ಗ್ರಾಮಾಂತರ ಪೋಲೀಸ್ ಠಾಣೆ

ವಿರುದ್ಧ

**ಆರೋಪಿ** : ಭತ್ರಜುಲ ನರಸಿಂಹರಾಜು.ಬಿ
ಬಿನ್ ಭತ್ರಜುಲ ಪ್ರಭಾಕರ,
ವಯಸ್ಸು 37 ವರ್ಷ,
ವಾಸಃ 3-145-9-6-8
ಪ್ರಶಾಂತ್ ನಗರ, 14 ನೇ ಕ್ರಾಸ್,
ಮದನ, ಮದನಪಲ್ಲಿ ತಾಲ್ಲೂಕು,
ಚಿತ್ತೂರು, ಆಂಧ್ರಪ್ರದೇಶ-517325.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರ ರಡಿಯಲ್ಲಿ ಮಾಡಿದ ಆಪಾಧನೆ**

**ಶ್ರೀಮತಿ ಹರ್ಷಿತ.,** ಬಿ.ಎ., ಎಲ್‌ಎಲ್.ಬಿ

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ಚಿಂತಾಮಣಿ**

ಆರೋಪಿಃ ಭತ್ರಜುಲ ನರಸಿಂಹರಾಜು.ಬಿ ಬಿನ್ ಭತ್ರಜುಲ ಪ್ರಭಾಕರ,
ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ-

ದಿನಾಂಕ 14-05-2024 ರಂದು ರಾತ್ರಿ ಸುಮಾರು 09.45 ರ ಸಮಯದಲ್ಲಿ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಬೆಂಗಳೂರು-ಕಡಪ ರಸ್ತೆಯಲ್ಲಿ ಬರುವ ಚಿನ್ನಸಂದ್ರ ಗ್ರಾಮದ ಸಮೀಪ ಇರುವ ಭಾರತ್ ಪೆಟ್ರೋಲ್ ಬಂಕ್ ಪಕ್ಕದ ರಸ್ತೆಯಲ್ಲಿ ರಸ್ತೆಯ ಎಡಭಾಗದಲ್ಲಿ ಆರೋಪಿಯಾದ ನೀವು ಬೆಂಗಳೂರು ಕಡೆಯಿಂದ ಎಪಿ-39-ಜೆಡ್-0014 ಸಂಖ್ಯೆಯ ಎ.ಪಿ.ಎಸ್.ಆರ್.ಟಿ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿರುತ್ತೀರಿ, ಆ ಮೂಲಕ ನೀವು **ಭಾ.ದಂ.ಸಂ. ಕಲಂ 279** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

**ಕೊನೇಯದಾಗಿ,** ಅದೇ ದಿನ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ, ಅದೇ ಸಂಬಂಧವಾಗಿ, ಆರೋಪಿಯಾದ ನೀವು ಬೆಂಗಳೂರು ಕಡೆಯಿಂದ ಎಪಿ**-39-ಜೆಡ್-0014**

ಸಂಖ್ಯೆಯ ಎ.ಪಿ.ಎಸ್.ಆರ್.ಟಿ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ ನಾರಾಯಣಸ್ವಾಮಿ ರವರು ಕೆಂದನಹಳ್ಳಿ ಗ್ರಾಮದಿಂದ ಚಿನ್ನಸಂದ್ರ ಗ್ರಾಮಕ್ಕೆ ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಬರುತ್ತಿದ್ದಾಗ, ಮೃತ ನಾರಾಯಣಸ್ವಾಮಿರವರಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಮೃತ ನಾರಾಯಣಸ್ವಾಮಿರವರಿಗೆ ತಲೆಯ ಎಡ ಹಣೆಗೆ, ಬಲ ತಲೆಗೆ, ತಲೆಯ ಹಿಂಭಾಗಕ್ಕೆ ತೀವ್ರತರ ರಕ್ತಗಾಯಗಳಾಗಿ, ಎಡಕಾಲು ಮುರಿದು, ತರಚಿದ ರಕ್ತಗಾಯಗಳಾಗಿ, ಬಲಕೈಗೆ, ಎರಡು ಕಾಲುಗಳ ಪಾದಗಳ ಬಳಿ ಎರಡು ಮುಂಗೈಗಳಿಗೆ ಹಾಗೂ ಮೈಮೇಲೆ ಇತರೆ ಕಡೆ ತರಚಿದ ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ, ಆ ಮೂಲಕ ನೀವು **ಭಾ.ದಂ.ಸಂ.ಕಲಂ 304(ಎ)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಣೆ ಸಲ್ಲಿಸಲಾಗಿದೆ.

ಪ್ರಶ್ನೆಃ ಈ ಮೇಲಿನ ಆಪಾಧನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

(ಈ ಮೇಲಿನ ಆಪಾಧನೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಕೊಟ್ಟ ಉತ್ತರವನ್ನು ಕೊಟ್ಟಂತೆ ಬರೆಯಲಾಯಿತು.)

ಸಹಿ/-

**ಸ್ಥಳಃ ಚಿಂತಾಮಣಿ.** **ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ದಿನಾಂಕಃ24-10-2025.** **ನ್ಯಾಯಾಲಯ, ಚಿಂತಾಮಣಿ.**

ಆರೋಪಿಯ ಸಹಿಃ